# ಶಸ್ತ್ರಚಿಕಿತ್ಸೆಯ ನಂತರ ಹೊಸ ಬದುಕಿಗೆ ಹೊಸ ಬೆಳಕು



> 'ನನ್ನ ಎರಡೂ ಮಂಡಿ ಚಿಪ್ಪುಗಳ ಬದಲಾವಣೆ ಶಸ್ತ್ರಚಿತ್ಸೆಯಾಗಿ ಕೇವಲ ಐದು ವಾರಗಳಾಗಿತ್ತು. ಆ ಹಂತದಲ್ಲಿ ನಾನು ಯಶಸ್ವಿಯಾಗಿ ಸಿಸೇರಿಯನ್ ಹಾಗೂ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿದ್ದೆ. ಕೆಲ ದಿನಗಳ ಹಿಂದೆ ಮಂಡಿ ನೋವಿನಿಂದಾಗಿ ಬಹಳ ದಿನ ಬಳಲಿದ್ದೆ. ಸಂಧಿವಾತ ಬದುಕನ್ನೇ ಹೈರಾಣಾಗಿಸಿತ್ತು. ನೋವು ದಿನದಿಂದ ದಿನಕ್ಕೆ ಉಲ್ಬಣಿಸುತಿತ್ತು. ಎರಡೂ ಮಂಡಿಗಳಲ್ಲೂ ಸಮಸ್ಯೆ ಇದ್ದಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಡುವುದೇ ಸೂಕ್ತ. ಅದರಿಂದ ಸಹಿಸಲಸಾಧ್ಯ ನೋವಿನಿಂದ ಬಳಲುವುದುಕ್ಕಿಂಥ ಹಸನಾದ ಗುಣಮಟ್ಟದ ಬದುಕು ಸಾಗಿಸುವುದು ಲೇಸು'
>
> – ಡಾ.ಸೌಭಾಗ್ಯ ಕೌಜಲಗಿ

ಶಸ್ತ್ರಚಿಕಿತ್ಸಕಳಾಗಿ, ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ವೃತ್ತಿ ಜೀವನ ಸಾಗಿಸುವುದರ ಜತೆಗೆ ಮನೆಯಲ್ಲಿ ಮಡದಿ ಹಾಗೂ ತಾಯಿಯಾಗಿ ಎಲ್ಲಾ ಹುದ್ದೆಗಳನ್ನೂ ಏಕಕಾಲದಲ್ಲಿ ನಿಭಾಯಿಸುವ ಗುರುತರ ಜವಾಬ್ದಾರಿ. ಆ ತಕ್ಷಣಕ್ಕೋ ಅಥವಾ ತಡವಾಗಿಯಾದರೂ ಅದರ ಬೆಲೆ ತೆರಲೇಬೇಕು. ದಾವಣಗೆರೆಯ ಜೆಜೆಎಂಸಿ ಕಾಲೇಜಿನಲ್ಲಿ ಸ್ತ್ರೀರೋಗತಜ್ಞೆ ಹಾಗೂ ಪ್ರಾಧ್ಯಾಪಕಿಯಾಗಿರುವ ಡಾ.ಸೌಭಾಗ್ಯ ಕೌಜಲಗಿ ಅವರ ಸಮಸ್ಯೆಯೂ ಇದಕ್ಕಿಂಥ ಭಿನ್ನವಾಗಿರಲಿಲ್ಲ. ದಿನದ 12 ಗಂಟೆ ನಿಲ್ಲಲೇಬೇಕಾದ ಕೆಲಸ. ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗ ಹಾಗೂ ಶಸ್ತ್ರಚಿಕಿತ್ಸೆ ನಡೆಸುವಾಗ ನಿಂತೇ ಇರಬೇಕಾದ ಅನಿವಾರ್ಯತೆ.

ಹತ್ತು ವರ್ಷಗಳ ಹಿಂದೆ, ಬಿಡುವಿಲ್ಲದ ಈ ವೈದ್ಯೆಯ ಎಡ ಮಂಡಿಯ ಸಂಧಿನಲ್ಲಿ ನೋವು ಕಾಣಿಸಿಕೊಂಡಿತು. ದುರದೃಷ್ಟವಶಾತ್, ತಮ್ಮ ದೈನಂದಿನಿ ಬಿಡುವಿಲ್ಲದ ಕೆಲಸಗಳಲ್ಲಿ ನೋವನ್ನು ನಿರ್ಲಕ್ಷಿಸಿದರು. ಅದು ದಿನದಿಂದ ದಿನಕ್ಕೆ ಉಲ್ಬಣಿಸಿತು. ಕೆಲವೇ ವರ್ಷಗಳಲ್ಲಿ ಅದೇ ರೀತಿಯ ನೋವು ಬಲಮಂಡಿಯಲ್ಲೂ ಕಾಣಿಸಿಕೊಂಡಿತು. ಎಲ್ಲವೂ ನಿರಾತಂಕವಾಗಿ ಸಾಗುತ್ತಿದ್ದ ಬದುಕು ನಿಧಾನವಾಗತೊಡಗಿತು. ಚಿಕ್ಕ ಕೆಲಸಗಳೂ ಬೆಟ್ಟದಂತೆ ಕಾಣಲು ಆರಂಭಿಸಿದವು. ಇದು ಅವರ ದೈನಂದಿನ ಬದುಕನ್ನು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದವು. ನಿಲ್ಲುವುದು ಹಾಗೂ ನಡೆಯುವುದು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಬದುಕು ಜಟಿಲವಾಗತೊಡಗಿತು.

'ಈ ನೋವನ್ನು ಸಹಿಸುವುದು ಅಸಾಧ್ಯವಾಯಿತು. ಫಿಸಿಯೋಥೆರಪಿ ಹಾಗೂ ಅನಾಲೆಜಿಸಿಕ್ಸ್‌ನಂಥ ಕೆಲವೊಂದು ಪರಿಹಾರಗಳ ಮೊರೆ ಹೋದೆ. ಶಸ್ತ್ರಚಿಕಿತ್ಸೆ ಕುರಿತು ಸ್ನೇಹಿತರು ಹಾಗೂ ಕುಟುಂಬದ ಕೆಲ ಸದಸ್ಯರು ನಕಾರಾತ್ಮಕ ಮಾತುಗಳನ್ನಾಡಿದರು. ಆದರೆ ಆ ಹೊತ್ತಿಗಾಗಲೇ ಸಂಧುಗಳಲ್ಲಿನ ನೋವು ವಿಪರೀತ ಎನ್ನಿಸುವಷ್ಟರ ಮಟ್ಟಿಗೆ ಹೋಗಿತ್ತು' ಎಂದು ಡಾ.ಸೌಭಾಗ್ಯ ತಮ್ಮ ನೋವಿನ ಕಥನವನ್ನು ಹೇಳಿದರು.

ಕಳೆದ ವರ್ಷ ಡಾ.ಸೌಭಾಗ್ಯ ಅವರ ಮಗ ಅವರೂ ವೈದ್ಯರಾಗಿದ್ದು, ತಮ್ಮ ಪರಿಚಯಸ್ತರಲ್ಲಿ ತಮ್ಮ ತಾಯಿಯ ಈ ಸಮಸ್ಯೆಯ ಕುರಿತು ವಿಚಾರಿಸಿದರು. ಆಗ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯ ಮೂಳೆ ಹಾಗೂ ಸಂಧು ಮರುಜೋಡಣೆ ಶಸ್ತ್ರಚಿಕಿತ್ಸಕ ಡಾ.ನಾರಾಯಣ ಹುಲ್ಸೆ ಅವರನ್ನು ಭೇಟಿ ಮಾಡಲು ಸಲಹೆ ನೀಡಿದರು. ನಮ್ಮ ತಾಯಿಯ ಮಂಡಿ ನೋವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಡಾ.ಹುಲ್ಸೆ ಅವರು ಔಷಧಗಳನ್ನು ನೀಡಿ ಉಪಷಮನ ನೀಡುವ ಹಂತ ದಾಟಿರುವುದರಿಂದ ಮಂಡಿ ಬದಲಾವಣೆಯೇ ಸರಿಯಾದ ಹಾಗೂ ಸೂಕ್ತ ಚಿಕಿತ್ಸೆ ಎಂದು ಅಭಿಪ್ರಾಯಪಟ್ಟರು.

55 ವರ್ಷದ ಸ್ತ್ರೀರೋಗ ತಜ್ಞೆಗೆ ತಾನು ಅನುಭವಿಸುತ್ತಿದ್ದ ನೋವಿಗಿಂಥ ಶಸ್ತ್ರಚಿಕಿತ್ಸೆಯೇ ಸರಿಯಾದ ಮದ್ದು ಎಂದೆನಿಸಿತು. ಅದಕ್ಕೆ ತಾವೂ ಒಬ್ಬರು ವೈದ್ಯೆಯಾಗಿದ್ದು ಸಹಕಾರಿಯಾಯಿತು. 'ತಾನೂ ಒಬ್ಬ ಶಸ್ತ್ರಚಿಕಿತ್ಸಕರಾಗಿದ್ದರಿಂದ ಮಂಡಿ ಬದಲಾವಣೆಯ ಅನಿವಾರ್ಯತೆ ಹಾಗೂ ಅದರ ಪ್ರಯೋಜನಗಳನ್ನು ಅರಿಯಲು ಹೆಚ್ಚು ಕಾಲ ಹಿಡಿಯಲಿಲ್ಲ. ದ್ವಿಪಾರ್ಶ್ವಕ ಮಂಡಿ ಬದಲಾವಣೆಗೆ ಮುಂದಾಗಿದ್ದೂ ಸ್ವತಃ ಅವರೇ. ಸಾಮಾನ್ಯವಾಗಿ ಸಂಧಿವಾತದಿಂದ ಬಳಲುವವರಿಗೆ ಎರಡೂ ಮಂಡಿಗಳಲ್ಲಿ ನೋವು ಸಮಸ್ಯೆ ಇರುತ್ತದೆ. ಇದನ್ನು ಹೊರತುಪಡಿಸಿ ಅವರು ಫಿಟ್ ಇರುತ್ತಾರೆ. ಹೀಗಾಗಿ ಆಸ್ಪತ್ರೆಯಲ್ಲೇ ಈ ಕ್ರಿಯೆಯನ್ನು ನಡೆಸಲಾಗುತ್ತದೆ' ಎಂದು ಡಾ.ಹುಲ್ಸೆ ಹೇಳುತ್ತಾರೆ.

ಸಂಪೂರ್ಣ ಮಂಡಿ ಬದಲಾವಣೆ ಅಥವಾ ಸಂಪೂರ್ಣ ಮಂಡಿಯ ಆರ್ಥರೋಪ್ಲಾಸ್ಟಿ ಎಂಬ ಶಸ್ತ್ರಚಿಕಿತ್ಸೆಯಲ್ಲಿ ಹಾನಿಗೆ ಒಳಗಾದ ಭಾರ ಹೊರುವ ಮಂಡಿಯ ಸಂಧುಗಳನ್ನು ಬದಲಾಯಿಸಲಾಗುತ್ತದೆ. ಆ ಸ್ಥಳಕ್ಕೆ ಅದೇ ಮಾದರಿಯನ್ನ ಹೋಲುವ ವಸ್ತುವನ್ನು ಜೋಡಿಸಲಾಗುತ್ತದೆ. ಜತೆಗೆ ನೋವು ನಿವಾರಿಸಲು ಅನುಕೂಲವಾಗುವಂತೆ ಚಿಕಿತ್ಸೆಯನ್ನೂ ನೀಡಲಾಗುತ್ತದೆ. ದ್ವಿಪಾರ್ಶ್ವಕ ಮಂಡಿ ಬದಲಾವಣೆ ಶಸ್ತ್ರಚಿಕಿತ್ಸೆಯಲ್ಲಿ ಒಂದೇ ಬಾರಿ ನೀಡುವ ಅರಿವಳಿಕೆಯಿಂದ ಏಕಕಾಲದಲ್ಲಿ ಎರಡೂ ಮಂಡಿಗಳ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಆಸ್ಪತ್ರೆಯಲ್ಲಿ ಕೇವಲ ಒಂದೇ ದಿನದಲ್ಲೇ ಎರಡೂ ಮಂಡಿಗಳು ಗುಣಮುಖ ಹಾದಿ ತುಳಿಯುತ್ತವೆ. ಶಸ್ತ್ರಚಿಕಿತ್ಸೆ ನಡೆದ ನಾಲ್ಕನೇ ದಿನದಿಂದ ನಡೆಯಲು ಆರಂಭಿಸಿ, ಬಹುಬೇಗ ಅವರು ಮನೆಗೆ ಹೋದರು. ನಿರಂತರವಾಗಿ ನೀಡಲಾಗುತ್ತಿದ್ದ ಫಿಸಿಯೋಥೆರಪಿಯಿಂದ ಸದಾ ಬಿಡುವಿಲ್ಲದ ಕೆಲಸದಲ್ಲಿದ್ದ ವೈದ್ಯರು ಒಂದು ತಿಂಗಳ ನಂತರ ಮತ್ತೆ ಕೆಲಸಕ್ಕೆ ಮರಳಿದ್ದಾರೆ.

ಶಸ್ತ್ರಚಿಕಿತ್ಸೆಗೆ ಒಳಪಟ್ಟ ಕೇವಲ 5 ವಾರಗಳಲ್ಲಿ ಅವರು ಯಶಸ್ವಿಯಾಗಿ ಸಿಸೇರಿಯನ್ ನಡೆಸಿ ಸಂತನಾಹರಣ ಶಸ್ತ್ರಚಿಕಿತ್ಸೆಯನ್ನೂ ಮಾಡಿದ್ದಾರೆ. ಇಷ್ಟು ಮಾತ್ರವಲ್ಲ ಗೃಹಿಣಿಯಾಗಿ ಮನೆಯಲ್ಲೂ ಈಗ ಅವರು ಸಕ್ರೀಯರಾಗಿದ್ದಾರೆ. ದಸರಾ ಹಬ್ಬದ ಸಂದರ್ಭದಲ್ಲಿ ಅವರು ಮನೆಗೆ ಬಂದಿದ್ದ 15 ಮಂದಿ ಅತಿಥಿಗಳಿಗೆ ರುಚಿಕಟ್ಟಾದ ಅಡುಗೆ ಮಾಡಿ ಉಣಬಡಿಸಿದ್ದಾರೆ. ನೋವಿನ ತಡೆ ಇಲ್ಲದೆ ಕುಟುಂಬ ಸದಸ್ಯರೊಂದಿಗೆ ಸಂತಸದ ಬದುಕು ನಡೆಸುತ್ತಿದ್ದಾರೆ.

'ನೋವು ನಿವಾರಣೆಯಾಗಿದೆ. ಈಗ ನಾನು ಆಸ್ಪತ್ರೆ ಹಾಗೂ ಮನೆಯಲ್ಲಿ ದೈನಂದಿನ ಬದುಕನ್ನು ಸಂಭ್ರಮಿಸುತ್ತಿದ್ದೇನೆ. ಈಗ ಎಷ್ಟು ಹೊತ್ತು ನಿಂತರೂ ನೋವು ಇರದು. ಸಮಸ್ಯೆಯೂ ಬಾರದು' ಎಂದು ಡಾ.ಸೌಭಾಗ್ಯ ತಮ್ಮ ಕಥೆಯನ್ನು ವಿವರಿಸಿದರು.



**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ
ಬೆಂಗಳೂರು. ಮೊ: 9663367253
Mail: care.bng@fortishealthcare.com.
Website: www.fortishealthcare.com